ಶ್ರೀ ಎಂ. ಮಹದೇವ್.—ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ನಂಜನಗೂಡು ಟೌನಿನ ಕುಡಿಯುವ ನೀರಿನ ಯೋಜನೆಯ ಅಂದಾಜು ವೆಚ್ಚ ಎಷ್ಟು ಮತ್ತು ಅದರ ವಿವರಗಳನ್ನು ನನಗೆ ಒದಗಿಸಿಕೊಡುತ್ತಾರೆಯೇ ? ಏಕೆಂದರೆ ನಮಗೆ ವಿಷದ ನೀರು ಕುಡಿದು ಕುಡಿದು ಸಾಕಾಗಿದೆ. ನಂಜನಗೂಡಿನ ಜನ ನಮಗೆ ಒಳ್ಳೆಯ ನೀರು ಯಾವಾಗ ಕುಡಿಸುತ್ತಾರೆಂದು ಬಹಳ ಕಾತುರತೆಯಿಂದ ಇದ್ದಾರೆ. ನಂಜನಗೂಡು ದಕ್ಷಿಣ ಕಾಶಿ. ಅಲ್ಲಿಗೆ ಹೊರಗಡೆಯಿಂದ ಲಕ್ಷಾಂತರ ಜನ ಭಕ್ತಾದಿಗಳು ಬರುತ್ತಾರೆ. ನಾವು ವಿಷದ ನೀರು ಕುಡಿಯುವುದರ ಜೊತೆಗೆ ಭಕ್ತಾದಿಗಳಿಗೂ ವಿಷದ ನೀರನ್ನು ಕುಡಿಸುವುದಕ್ಕೆ ಇಷ್ಟವಿಲ್ಲ. ಆದುದರಿಂದ ನಂಜನಗೂಡಿನ ನಾಗರೀಕರಿಗೆ ಒಳ್ಳೆಯ ನೀರನ್ನು ಯಾವಾಗ ಕೊಡುತ್ತೀರಿ ? ಈ ಯೋಜನೆಯ ಅಂದಾಜು ವೆಚ್ಚದ ವಿವರವನ್ನು ದಯವಿಟ್ಟು ಕೊಡುತ್ತೀರಾ.

೧೨-೦೦ ಪಿ. ಎಂ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಸಭಾಧ್ಯಕ್ಷರೇ. ಸನ್ಮಾನ್ಯ ಸದಸ್ಯರಾದಂಥ ಮಹದೇವ್‌ರವರು ಒಂದು ಪ್ರಸಂಖವಾದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ನಂಜನಗೂಡು ಟೌನ್‌ಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡುವ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪಮಾಡಿ ವಿಷದ ನೀರನ್ನು ಮತ್ತು ಕಲುಷಿತ ನೀರನ್ನು ಒದಗಿಸಲಾಗುತ್ತಿದೆಯೆಂದು ಹೇಳಿದ್ದಾರೆ. ಅದನ್ನು ಸರ್ಕಾರ ಗಮನಿಸಿಕೊಂಡಿದೆ. ಅದರ ಮೂಲ ವ್ಯವಸ್ಥೆಯನ್ನು ಮಾರ್ಪಾಡು ಮಾಡುವುದಕ್ಕೋಸ್ಕರ ಸುಮಾರು ೧ ಕೋಟಿ ೭೫ ಲಕ್ಷ ರೂಪಾಯಿಗಳ ಒಂದು ಯೋಜನೆಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದ್ದಾರೆ. ಆದ್ಯತೆ ಮೇರೆಗೆ ಆ ಯೋಜನೆಯನ್ನು ಕೈಗೊಂಡು ಮುಗಿಸಲಾಗುತ್ತದೆ. ಮಾನ್ಯ ಸದಸ್ಯರು ಇದು ಯಾತ್ರಾ ಸ್ಥಳವಾಗಿದೆಯೆಂದೂ ಹೇಳಿದ್ದಾರೆ. ನನಗೆ ಗೊತ್ತು, ಅದು ನನಗೆ ಜನ್ಮ ಕೊಟ್ಟಂತಹ ತಾಯಿಯ ತವರೂರು ಕೂಡ ಆಗಿದೆ. ಆದ್ದರಿಂದ ಈ ಯೋಜನೆಯನ್ನು ಹೆಚ್ಚು ಆದ್ಯತೆ ಮೇರೆಗೆ ಕೈಗೊಂಡು ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಲು ಆ ಯೋಜನೆಯನ್ನು ಪ್ರಾಮಾಣಿಕವಾಗಿ ಜಾರಿಗೆ ಕೊಡುತ್ತೇನೆಂದು ನಾನು ಭರವಸೆ ಕೊಡುತ್ತೇನೆ.

ಶ್ರೀ ಗೋವಿಂದರಾಜ ಆರ್. ಸಾಂಪ್ರ.—ನಾನು ಸಿಂಗಿನೇ ಪ್ರಶ್ನೆಯನ್ನು ಕೇಳುತ್ತೇನೆ.

ಅಧ್ಯಕ್ಷರು.—ನೀವು ಕುಳಿತುಕೊಳ್ಳಿ. ಆಗಲೇ ಸದನದಲ್ಲಿ ಇಲ್ಲದೇ ಇದ್ದ ಮಾನ್ಯ ಸದಸ್ಯರುಗಳ ಹೆಸರುಗಳನ್ನು ಪುನಃ ಕರೆಯುತ್ತೇನೆ. ಶ್ರೀ ಹರ್ಷಕುಮಾರ ಗೌಡ.

ಮೈಸೂರು ನಗರದ ನೀರಿನ ಅಭಾವ ನೀಗಿಸುವ ಬಗ್ಗೆ

೧೦೧೮. ಶ್ರೀ ಕೆ. ಹರ್ಷಕುಮಾರಗೌಡ (ಚಾಮರಾಜ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೈಸೂರು ನಗರದ ಪ್ರಸಕ್ತ ಜನತೆಗೆ ಬೇಕಾಗುವ ಕುಡಿಯುವ ನೀರಿನ ಪ್ರಮಾಣವೆಷ್ಟು ?

ಆ) ನೀರಿನ ಅಭಾವವನ್ನು ನೀಗಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಇ) ಈ ಕಾರ್ಯಕ್ರಮ ಜಾರಿಗೊಳಿಸಲು ಸರ್ಕಾರವು ಖರ್ಚು ಮಾಡುವ ಹಣವೆಷ್ಟು ?

ಈ) ಯಾವಾಗ ಈ ಕಾರ್ಯಕ್ರಮಗಳನ್ನು ಪೂರ್ಣಗೊಳಿಸಲಾಗುವುದು ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಸುಮಾರು ೯೪.೫೦ ದಶಲಕ್ಷ ಲೀಟರ್.

ಆ) ಈ ಬೇಸಿಗೆಯಲ್ಲಿ ಒಟ್ಟು ೭೯ ಕೊಳವೆ ಬಾವಿಗಳನ್ನು ತೋಡಲಾಗಿದ್ದು, ಇವುಗಳಲ್ಲಿ ೨೫ ಕೊಳವೆ ಬಾವಿಗಳಿಗೆ ವಿದ್ಯುತ್ ಯಂತ್ರಗಳನ್ನು ಅಳವಡಿಸಲಾಗಿದೆ. ಇದಲ್ಲದೆ, ನಗರಕ್ಕೆ ನೀರಿನ ಪ್ರಮಾಣವನ್ನು ಹೆಚ್ಚಿಸಲು ಎರಡು ಯೋಜನೆಗಳನ್ನು ಒಟ್ಟು ರೂ. ೨೬೩,೦೦೦ ಲಕ್ಷಗಳಿಗೆ ತಯಾರಿಸಲಾಗಿದ್ದು, ಈ ಯೋಜನೆಯಲ್ಲಿ ಒಟ್ಟು ೪೫.೪೦ ದಶಲಕ್ಷ ಲೀಟರ್ ನೀರನ್ನು ಕಾವೇರಿ ನದಿಯಿಂದ ಒದಗಿಸುವ ಕಾರ್ಯಪ್ರಗತಿಯಲ್ಲಿದೆ. ಈ ಯೋಜನೆಯನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕೆಲಸ ಮಾಡಲಾಗುತ್ತಿದೆ ಇದಲ್ಲದೆ ಸರ್ಕಾರವು ನಗರದಲ್ಲಿರುವ ವಿತರಣಾ ಕೊಳವೆಗಳನ್ನು ನವೀಕರಿಸಲು ರೂ. ೬೫೦.೦೦ ಲಕ್ಷಗಳ ಅಂದಾಜಿಗೆ ಒಪ್ಪಿಗೆ ನೀಡಲಾಗಿದೆ.

ಇ) ರೂ. ೭೬೩.೦೦ ಲಕ್ಷಗಳ ಯೋಜನೆಯನ್ನು ಕಾರ್ಯಗತಗೊಳಿಸಲು, ಈವರೆವಿಗೆ ಮಂಡಳಿಯು ರೂ. ೧೦.೭೫ ಲಕ್ಷಗಳನ್ನು ಖರ್ಚು ಮಾಡಲಾಗಿದೆ. ಮತ್ತು ೬೫೦.೦೦ ಲಕ್ಷ ರೂಗಳನ್ನು ಯೋಜನೆಗೆ ಜೀವವಿಮಾ ನಿಗಮದ ಸಹಾಯವನ್ನು ಕೋರಲಾಗಿದೆ.

ಈ) ಈ ಯೋಜನೆಗಳನ್ನು ೩ ವರ್ಷಗಳಲ್ಲಿ ಪೂರೈಸಲು ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ.

ಶ್ರೀ ಕೆ. ಹರ್ಷಕುಮಾರ್ ಗೌಡ.—ಮಾನ್ಯ ಅಧ್ಯಕ್ಷರೇ, ಸರ್ಕಾರದಿಂದ ಬಂದಿರುವ ಉತ್ತರದ ಪ್ರಕಾರ ೭೯ ಕೊಳವೆ ಬಾವಿಗಳನ್ನು ಈಗಾಗಲೇ ಮೈಸೂರು ನಗರದಲ್ಲಿ ತೋಡಲಾಗಿದೆಯೆಂದು ಹೇಳಿದ್ದಾರೆ. ಅದರೆ ೨೯ ಕೊಳವೆ ಬಾವಿಗಳಿಗೆ ಮಾತ್ರ ವಿದ್ಯುತ್‌ನ್ನು ಆಳವಡಿಸಿದ್ದಾರೆ. ಇನ್ನು ಮಿಕ್ಕ ಬಾವಿಗಳಿಗೆ ಯಾವಾಗ ವಿದ್ಯುತ್‌ನ್ನು ಆಳವಡಿಸುತ್ತಾರೆ ಎನ್ನುವುದು ಬಂದು ಪ್ರಶ್ನೆ ಮಂತ್ರಿ ಮೈಸೂರು ನಗರದ ನೀರಿನ ಸಮಸ್ಯೆಯನ್ನು ನಿವಾರಣೆ ಮಾಡುವುದಕ್ಕಾಗಿ ಆರೂವರೆ ಕೋಟಿ ರೂಪಾಯಿಗಳ ಯೋಜನೆಯನ್ನು ಶೀಘ್ರವಾಗಿ ಪ್ರಾರಂಭ ಮಾಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ಈ ಯೋಜನೆಯನ್ನು ಮಾನ್ಯ ಮುಖ್ಯ ಮಂತ್ರಿಯವರು ಈ ತಿಂಗಳು ೧೬ರಂದು ಉದ್ಘಾಟನೆ ಮಾಡಬೇಕಾಗಿತ್ತು, ಮಾಡಲಾಗಲಿಲ್ಲ. ಆದ್ದರಿಂದ ಈ ಯೋಜನೆಯ ಪ್ರಾರಂಭೋತ್ಸವವನ್ನು ಯಾವಾಗ ಮಾಡುತ್ತೀರಿ? ಮತ್ತೆ ಕೊನೆಯದಾಗಿ. ಈ ರೀತಿ ಕಾವೇರಿ ಯೋಜನೆಯ ಪ್ರಾರಂಭೋತ್ಸವವನ್ನು ಮಾಡುವ ಸಮಯದಲ್ಲಿ ಬೆಂಗಳೂರು ನಗರದಲ್ಲಿ ಈಗಾಗಲೇ ಹಲವಾರು ಹಂತಗಳಲ್ಲಿ ಕಾವೇರಿ ಮಾತೆಯ ವಿಗ್ರಹಗಳನ್ನು ಪ್ರತಿಷ್ಠಾಪನೆ ಮಾಡಿದ್ದೀರಿ, ಅದೇ ರೀತಿ ಮೈಸೂರು ನಗರದಲ್ಲೂ ಕೂಡ ಪ್ರಥಮವಾಗಿ ಕಾವೇರಿ ಮಾತೆಯ ವಿಗ್ರಹವನ್ನು ಏಕೆ ಪ್ರತಿಷ್ಠಾಪನೆ ಮಾಡಬಾರದೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ. ಜೊತೆಗೆ ಈ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೆ ಮೂರು ವರ್ಷಗಳ ಕಾಲಾವಧಿಯನ್ನು ಕೇಳಿದ್ದೀರಿ. ಮೈಸೂರು ನಗರದ ಹತ್ತು ಲಕ್ಷ ಜನತೆಯ ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸುವ ದೃಷ್ಟಿಯಿಂದ ಅತ್ಯಂತ ಶೀಘ್ರಗತಿಯಲ್ಲಿ ಈ ಯೋಜನೆಯನ್ನು ಕಾರ್ಯಗತಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ.ಎನ್. ನರಸಿಂಹಮೂರ್ತಿ.—ಮಾನ್ಯ ಸಭಾಧ್ಯಕ್ಷರೇ, ಮೈಸೂರು ನಗರವು ಬಹುಶಃ ಅತ್ಯಂತ ಪ್ರಮುಖ ನಗರಗಳಲ್ಲಿ ಒಂದು. ಮೈಸೂರು ನಗರದ ಕುಡಿಯುವ ನೀರಿನ ವಿತರಣೆಯ ವ್ಯವಸ್ಥೆಯು ತಾಂತ್ರಿಕ ದೋಷದಿಂದ ಸ್ವಲ್ಪ ತೊಂದರೆಯಾಗಿದೆ. ತಾವು ಏನು ಅಭಿಪ್ರಾಯಪಟ್ಟಿದ್ದೀರಿ, ಹಾಗೆಯೇ ನಮ್ಮ ಸರ್ಕಾರ ಬಂದ ಮೇಲೆ ನಾವು ಅನೇಕ ಪ್ರಮುಖವಾದ ಯೋಜನೆಗಳನ್ನು ಕೈಗೊಂಡಿದ್ದೇವೆ. ಈಗ ಅಧಿವೇಶನ ನಡೆಯುತ್ತಿರುವುದರಿಂದ ಅದರ ಬಗ್ಗೆ ಗಮನ ಹರಿಸುವುದಕ್ಕಾಗಲಿಲ್ಲ. ಈ ಅಧಿವೇಶನ ಮುಗಿದ ತಕ್ಷಣವೇ ಅಂದರೆ ಆಗಸ್ಟ್ ೧೫ನೇ ತಾರೀಖಿನೊಳಗಾಗಿ ನಾವು ಏನೆಲ್ಲಾ ಯೋಜನೆಗಳನ್ನು ಕೈಗೊಂಡಿದ್ದೇವೆಯೋ ಅದಕ್ಕೆಲ್ಲಾ ಪ್ರಾರಂಭೋತ್ಸವವನ್ನು ಮಾಡುವುದಕ್ಕೆ ಕಾತುರರಾಗಿದ್ದೇವೆಂದು ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ. ಹರ್ಷಕುಮಾರ ಗೌಡ.—ಈ ಕಾರ್ಯಕ್ರಮ ಉದ್ಘಾಟನೆ ಮಾಡುವಾಗ ಮೈಸೂರಿನಲ್ಲಿ ಪ್ರಥಮವಾಗಿ ಕಾವೇರಿ ವಿಗ್ರಹವನ್ನು ಪ್ರತಿಷ್ಠಾಪನೆ ಮಾಡುವ ಬಗ್ಗೆ ಕೇಳಿದ್ದೆ.

ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೇ, ಸರ್ಕಾರ ಇದನ್ನು ಪರಿಶೀಲಿಸುತ್ತದೆ.

ರಾಜ್ಯದ ನಗರಪಾಲಿಕೆಗಳಲ್ಲಿ ನೌಕರರ ಜ್ಯೇಷ್ಠತಾ ಪಟ್ಟಿ

೧೧೨೧ ಶ್ರೀ ಗೋಪಿನಾಥ್ ಆರ್. ಶಾಂಡ್ರ (ಹುಬ್ಬಳ್ಳಿ ಗ್ರಾಮಾಂತರ) ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ದಯವಿಟ್ಟು ಉತ್ತರಿಸುವರೆ.—

(ಅ) ಸರಕಾರವು ರಾಜ್ಯದೊಳಗಿನ ಮಹಾನಗರ ಸಭೆಗಳಲ್ಲಿಯು ನೌಕರದಾರರ ಸಾಮಾನ್ಯ ಸೇವಾ ಪಟ್ಟಿ ರಚಿಸಲು ಉದ್ದೇಶಿಸಿದೆಯೇ ?

(ಆ) ಈ ಬಗ್ಗೆ ಮಾಗಣಿ ಇದ್ದರೂ ಹಾಗೂ ಮಹಾನಗರಸಭೆ ಕಾಯ್ದೆ ಜಾರಿಗೆ ಬಂದರೂ ಸಾಮಾನ್ಯ ಸೇವಾವೃಂದ ರಚಿಸುವದಕ್ಕಾಗಿ ಸರಕಾರ ಕೈಕೊಂಡಿರುವ ಕ್ರಮಗಳು ಯಾವುವು ?

(ಇ) ತಡವಾಗಲಿಕ್ಕೆ ಕಾರಣಗಳೇನು ?

ಟಿ. ಎನ್. ನರಸಿಂಹಮೂರ್ತಿ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

(ಅ) ಹೌದು